ಸಂ29 2/17-18

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆ ಇಲಾಖೆಯ, 'ವಾಣಿಜ್ಯ ತೆರಿಗೆ ಕಾರ್ಯಾಲಯ,

'ಎ' ಬ್ಲಾಕ್ 80 ಅಡಿರಸ್ತೆ ರಾಜೇಂದ್ರನಗರ, ಕೋರಮಂಗಲ,

2ನೇ ಹಂತ ಬೆಂಗಳೂರು-47

ಸಂಖ್ಯೆ:ವಾ.ತೆ.ಜಂ/(ಜಾ)ಜಿ/ಸಿ.ಆರ್-01/ 2015-16, ದಿನಾಂಕ:17.07.2017

## ಟೆಂಡರ್ ನೋಟಿಫಿಕೇಶನ್

ಟೆಂಡರ್‌ಗಳನ್ನು ಎರಡು ಲಕೋಟೆಯಲ್ಲಿ ಸಲ್ಲಿಸುವ ಪದ್ಧತಿಯಲ್ಲಿ ಕರೆಯಲಾಗಿದ್ದು, ಟೆಂಡರನ್ನು ವಾಣಿಜ್ಯ ತೆರಿಗೆ ಇಲಾಖೆಯ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ)'ವಾಣಿಜ್ಯ ತೆರಿಗೆ ಕಾರ್ಯಾಲಯ-2,'ಎ' ಬ್ಲಾಕ್80 ಅಡಿರಸ್ತೆ, ರಾಜೇಂದ್ರನಗರ, ಕೋರಮಂಗಲ,ರವರ"ಅಧೀನ ಕಛೇರಿಯಾದ ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)" ದೇವನಹಳ್ಳಿ.(ದೇವನಹಳ್ಳಿ ಹಳೇ ತನಿಖಾಠಾಣೆ)ಕಟ್ಟಡಕ್ಕೆ ಭದ್ರತಾ ಸಿಬ್ಬಂದಿಗಳನ್ನು ಅಧೀಕೃತ ಏಜೆನ್ಸಿಗಳ ಮೂಲಕ ಭದ್ರತಾ ಸಿಬ್ಬಂದಿಗಳು ದಿನದ 24 ಗಂಟೆ ಕಾವಲು ಲೇಬರ್ ಕಾಯ್ದೆಯ ಪ್ರಕಾರ ಅರ್ಜಿಯನ್ನು 2017-18 ನೇ ಸಾಲಿಗೆ 12 ತಿಂಗಳ ಅವಧಿಗಾಗಿ ಅಂದರೆ ದಿ:01.08.2017 ರಿಂದ 31.07.2018ರ ಅವಧಿಗೆ ಈ ಕಛೇರಿಯ ಷರತ್ತು ಹಾಗೂ ನಿಬಂಧನೆಗಳಂತೆ ಸಲ್ಲಿಸುವುದು. ಸದರಿ ಟೆಂಡರ್ ಹಾಗೂ ಪ್ರಸ್ತಾವನೆ ಅರ್ಜಿ(Request for proposal (RFP) ಗಳನ್ನು website http//:ctax.nic.in ನಿಂದಡೌನ್ ಲೋಡ್ ಮಾಡಿಕೊಂಡು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಲೆಕ್ಕ ಶೀರ್ಷಿಕೆ 0040-00-102-0-06 ಕ್ಕೆ ಜಮಾ ಮಾಡಿದ ಚಲನ್‌ನೊಂದಿಗೆ ಟೆಂಡರ್ ಫಾರ್ಮಗಳನ್ನು, ಈ ಕಛೇರಿಗೆ ಸಲ್ಲಿಸಬಹುದು. ಅಲ್ಲದೇ ದಿ: 20.07.2017 ರಿಂದ 27.07.2018 ಸಂಜೆ 4.00 ಗಂಟೆಯವರೆಗೆ ಈ ಕಛೇರಿಯ ವೇಳೆಯಲ್ಲಿ ಟೆಂಡರ್ ಫಾರಂಗಳನ್ನು, ಟೆಂಡರ್ ಅರ್ಜಿ ಮೌಲ್ಯ ರೂ.100.00+18% ತೆರಿಗೆಯನ್ನು ಸೇರಿ ರೂ.118.00ಗಳನ್ನು ನೀಡಿ ಈ ಕಛೇರಿಯಿಂದಲೂ ಪಡೆಯಬಹುದು. ಸದರಿ ಮೊತ್ತವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಭದ್ರತಾ ಸಿಬ್ಬಂದಿಯನ್ನು ಪೂರೈಸುವ ಏಜೆನ್ಸಿಗಳು ಟೆಂಡರ್‌ನಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸಬೇಕು.

**ಮೊದಲನೇಯ ಲಕೋಟೆ ಟೆಕ್ನಿಕಲ್/ ಅರ್ಹತಾಪೂರ್ವ ಬಿಡ್‌ಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ಹೊಂದಿರ ತಕ್ಕದ್ದು.**

4. ಟೆಕ್ನಿಕಲ್/ ಅರ್ಹತಾಪೂರ್ವ ಬಿಡ್‌ನಲ್ಲಿ ನಿಗದಿತ ನಮೂನೆಯಲ್ಲಿ (ಆರ್.ಎಫ್.ಪಿ ಗೆ ಲಗತ್ತಿಸಿದ ಅನುಬಂಧ-1 ರಲ್ಲಿ ಕಾಣಿಸಿರುವಂತೆ) ಎಲ್ಲಾ ವಿವರಗಳನ್ನು ನಮೂದಿಸಿರಬೇಕು.
5. ಭಾರತೀಯ ಆದಾಯ ತೆರಿಗೆ ಕಾಯ್ದೆ-1957 ರಂತೆ ಇಲಾಖೆಯವರು ನೀಡಿದ ಪಾನ್ ನಂಬರ್‌ನ ಮಾಹಿತಿಯನ್ನು ನೀಡಬೇಕು.
6. ಬಿಡ್ ಸಲ್ಲಿಸುವ ಏಜೆನ್ಸಿಗಳು ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯದ ವಿವಿಧ ಇಲಾಖೆಗಳಲ್ಲಿ ಭದ್ರತಾ ಸಿಬ್ಬಂದಿ/ ವಾಹನ ಚಾಲಕರನ್ನು ಗುತ್ತಿಗೆ ಆಧಾರದ ಮೇಲೆ ಪೂರೈಸುವ ಅನುಭವವನ್ನು ಹೊಂದಿರಬೇಕು. ಹಾಗೂ ಪ್ರಥಮವಾಗಿ ಮದಲನೇಯ ಲಕೋಟೆಯಾದ ಟೆಕ್ನಿಕಲ್/ ಅರ್ಹತಾ ಪೂರ್ವ ಬಡ್ ಲಕೋಟೆಯನ್ನು ಸೀಲು ಮಾಡಿ ಅದರ ಮೇಲೆ "ಭದ್ರತಾ ಸಿಬ್ಬಂದಿಗಳ/ ವಾಹನ ಚಾಲಕರ ಪೂರೈಕೆಯ ಬಗ್ಗೆ ಟೆಂಡರ್" (ಟೆಕ್ನಿಕಲ್ ಬಿಡ್) ಎಂದು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು.

## ಎರಡನೇ ಲಕೋಟೆ – ಫೈನಾನ್ಸಿಯಲ್ ಬಿಡ್‌ಗೆ ಸಂಬಂಧಿಸಿರತಕ್ಕದ್ದು.

1. ಫೈನಾನ್ಸಿಯಲ್ ಬಿಡ್ ಗೆ ಸಂಬಂಧಿಸಿದ ಮಾಹಿತಿಯನ್ನು ನಿಗದಿತ(ನಮೂನೆಯಲ್ಲಿ ಆರ್.ಇ.ಪಿ ಗೆ ಲಗತ್ತಿಸಿದ ಅನುಬಂಧ–2 ರಲ್ಲಿ ಕಾಣಿಸಿರುವಂತೆ) ಎಲ್ಲಾ ವಿವರಗಳನ್ನು ನಮೂದಿಸಿರಬೇಕು ಹಾಗೂ ಸದರಿ ಲಕೋಟೆಯನ್ನು ಸೀಲು ಮಾಡಿ ಅದರ ಮೇಲೆ "ಭದ್ರತಾ ಸಿಬ್ಬಂದಿ ಪೂರೈಕೆಯ ಬಗ್ಗೆ ಟೆಂಡರ್(ಫೈನಾನ್ಸಿಯಲ್ ಬಿಡ್)" ಎಂದು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು.

2. ಟೆಕ್ನಿಕಲ್/ ಅರ್ಹತಾಪೂರ್ವ ಬಿಡ್‌ನ ಲಕೋಟೆ ಹಾಗೂ ಫೈನಾನ್ಸಿಯಲ್ ಬಿಡ್‌ಗೆ ಸಂಬಂಧಿಸಿದ ಲಕೋಟೆ. ಈ ಎರಡು ಲಕೋಟೆಗಳನ್ನು "ದೊಡ್ಡದಾದ ಲಕೋಟೆಯಲ್ಲಿ" ಹಾಕಿ ಸೀಲು ಮಾಡಿ ಅದರ ಮೇಲೆ " ಭದ್ರತಾ ಸಿಬ್ಬಂದಿಗಳ ಪೂರೈಕೆಯ ಬಗ್ಗೆ ಟೆಂಡರ್ " ಎಂದು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು ಹಾಗೂ ಈ ಲಕೋಟೆಯು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ) ಕೋರಮಂಗಲ, ಬೆಂಗಳೂರು. ಇವರ ಹೆಸರಿನಲ್ಲಿರಬೇಕು ಹಾಗೂ ಮೇಲ್ಕಾಣಿಸಿದ ಟೆಂಡರ್‌ಗಳು ಯಾವುದೇ ಕರಾರು ಅಥವಾ ಷರತ್ತಿಗೆ ಒಳಪಟ್ಟಿರಬಾರದು. ಒಂದು ವೇಳೆ ಯಾವುದೇ ಕರಾರು ಅಥವಾ ಷರತ್ತುಗಳು ವಿಧಿಸಿದ್ದು ಕಂಡು ಬಂದಲ್ಲಿ ಅವುಗಳನ್ನು ತಿರಸ್ಕರಿಸಲಾಗುವುದು ಹಾಗೂ ಟೆಕ್ನಿಕಲ್ / ಅರ್ಹತಾ ಪೂರ್ವ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರ್ ದಾರರ ಫೈನಾನ್ಸಿಯಲ್ ಬಿಡ್ ಗಳನ್ನು ಮಾತ್ರ ಪರಿಗಣಿಸಲಾಗುವುದು.

3. ಭರ್ತಿ ಮಾಡಿದ ಟೆಂಡರಿನ ಎರಡು ಲಕೋಟೆಗಳನ್ನು / ಅರ್ಜಿಗಳನ್ನು ದಿನಾಂಕ: 17.08.2017ರ ಸಾಯಂಕಾಲ 4.00 ಗಂಟೆಯೊಳಗಾಗಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ) ಕೋರಮಂಗಲ, ಬೆಂಗಳೂರು. ಇವರ ಕಛೇರಿಗೆ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಯಾವುದೇ ಟೆಂಡರ್ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

4. ಟೆಕ್ನಿಕಲ್/ ಅರ್ಹತಾಪೂರ್ವ ಬಿಡ್‌ನ ಲಕೋಟೆಗಳನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ) ಕೋರಮಂಗಲ, ಬೆಂಗಳೂರು. ಇವರ ಕಛೇರಿಯಲ್ಲಿ ದಿನಾಂಕ: 18.08.2017 ರಂದು ಬೆಳಿಗ್ಗೆ 11.00 ಗಂಟೆಗೆ ಹಾಜರಿದ್ದ ಬಿಡ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು ಹಾಗೂ ಅರ್ಹ ಪೂರ್ವ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರ್ ದಾರರ ಫೈನಾನ್ಸಿಯಲ್ ಬಿಡ್‌ಗಳನ್ನು ಪ್ರಸ್ತಾವನಾ ವಿನಂತಿಯ ಪ್ಯಾರಾ–6.3 ರಲ್ಲಿ ಸೂಚಿಸಿದಂತೆ ಕ್ರಮ ಕೈಗೊಳ್ಳಲಾಗುವುದು. ಈ ಕುರಿತಂತೆ ಯಾವುದೇ ಬಿಡ್‌ದಾರರಿಗೆ ವೈಯಕ್ತಿಕವಾಗಿ ಲಿಖಿತವಾದ ಸೂಚನೆಯನ್ನು ನೀಡಲಾಗುವುದಿಲ್ಲ.